

ಜಾನಪದ ಕ್ಷೇತ್ರದ ಹಿನ್ನೆಲೆಯಿಂದ ಒಂದು ಉದಾಹರಣೆ ಹೇಳುವುದಾದರೆ, ಸೋಬಾನೆ ಪದಗಳನ್ನು ಕಟ್ಟಿದವರು ಗಂಡಸರು. ಆದರೆ ಆದನ್ನು ಹಾಡುವವರು ಮಹಿಳೆಯರು. ಮಹಿಳೆಯರು ಹೇಗಿರಬೇಕು ಎಂಬ ಕಟ್ಟುಪಾಡುಗಳನ್ನು ಪುರುಷಪ್ರಧಾನ ಧೋರಣೆಯಿಂದ ಕಟ್ಟಲಾಗಿ, ಅದನ್ನು ಮಹಿಳೆಯರೇ ಹಾಡಿಕೊಂಡು ಇತರ ಮಹಿಳೆಯರೂ ಅದನ್ನೇ ಪಾಲಿಸುವಂತೆ ಹೇಳಲಾಗುತ್ತದೆ. ಇದೊಂದು ಬಹಳ ನಾಜೂಕಿನಿಂದ, ಆಕೆಯನ್ನು ನಿಯಂತ್ರಿಸುವ ವಿಧಾನವೆಂದು ಅನಿಸುತ್ತದೆ. ಹೆಣ್ಣು ಹೇಗಿರಬೇಕು ಎಂದು ಪುರುಷ ಬಯಸುತ್ತಾನೋ, ಹಾಗೆಯೇ ಇರಬೇಕೆಂದು ಈ ಹಾಡುಗಳ ಮೂಲಕ ಮಹಿಳೆಯರು ಬೋಧನೆ ಮಾಡುತ್ತಾರೆ. ಇಂತಹ ಅನೇಕ ಉದಾಹರಣೆಗಳನ್ನು ಕೊಡಬಹುದು. ಸಾಂಪ್ರದಾಯಿಕವಾಗಿ ಹೆಣ್ಣು ಹೇಗಿರಬೇಕು ಎಂಬುದನ್ನು ಅಲ್ಲಗಳೆಯುವ ಕೆಲಸ ಹೆಚ್ಚೇನೂ ಆಗಿಲ್ಲ. ಅಪರೂಪದ ಉದಾಹರಣೆಗಳು ಸಿಗಬಹುದು. ಹೆಣ್ಣು ಹೆಚ್ಚು ತಿರುಗಾಟ ಮಾಡಬಾರದು, ಸಭೆ ಸಮಾರಂಭಗಳಲ್ಲಿ ಅಥವಾ ಮನೆಯಲ್ಲಿ ದೊಡ್ಡ ದನಿಯಿಂದ ನಗಬಾರದು, ಆಕೆ ಗಟ್ಟಿಯಾಗಿ ಮಾತನಾಡಬಾರದು ಎಂಬೆಲ್ಲ ನಿಯಮಗಳು ದೈನಂದಿನ ಜೀವನದಲ್ಲಿ ಪದೇ ಪದೇ ಆಕೆಯ ಕಿವಿಗೆ ಬೀಳುವಂತೆ ಮತ್ತು ಆಕೆ ಅದಕ್ಕೆ ತಕ್ಕಂತೆ ತನ್ನ ಆಲೋಚನಾಗತಿಯನ್ನು ರೂಪಿಸಿಕೊಳ್ಳುವಂತೆ ಮಾಡಲಾಗುತ್ತದೆ. ಅಂದರೆ, ಜಾನಪದ ಪರಂಪರೆ ಬಹುತೇಕ ಯಥಾಸ್ಥಿತಿಯನ್ನು ಮುಂದುವರಿಸುವ ವಾಹಕವಾದದ್ದೇ ಹೆಚ್ಚು.

**-ಅರುಣ್ ಜೋಳದಕೂಡ್ಲಿಗಿ**

**ಸಹಾಯಕ ಪ್ರಾಧ್ಯಾಪಕ, ಡಾ. ಅಂಬೇಡ್ಕರ್ ಪದವಿ ಮಹಾವಿದ್ಯಾಲಯ, ಕಲಬುರಗಿ**

ವಹಿಸಿಕೊಂಡು ಮಾಡಿದ ಉದಾಹರಣೆಗಳು ಹೆಚ್ಚೇನೂ ಇಲ್ಲ. ಕೋವಿಡ್ ಸಂದರ್ಭದಲ್ಲಿ ಲಾಕ್‌ಡೌನ್ ಹೇರಿದಾಗ, ಮನೆಯಲ್ಲಿ ಅಡುಗೆ ಕೆಲಸಕ್ಕಾಗಿ ತಾನು ನೆರವಾದೆ ಎನ್ನುತ್ತ ಪಾತ್ರೆ ತೊಳೆಯುವ ಫೋಟೊಗಳನ್ನು ಹಾಕುವ ಮೂಲಕ ಸಮಾನತೆಯನ್ನು ಸಾಧಿಸಿದ ಅಲ್ಪ ಸಂತೃಪ್ತಿ ಕಾಣಿಸಿದ್ದುಂಟು. ಆದರೆ ಇದು ದೈನಂದಿನ ಚಟುವಟಿಕೆಯೂ ಅಲ್ಲ, ಈ ಕೆಲಸದ ಬಗ್ಗೆ ಹೆಚ್ಚೇನೂ ಬಾಧ್ಯತೆಯೂ ಇಲ್ಲ ಎಂಬುದನ್ನು ಈ ಸಂಭ್ರಮದ ಧ್ವನಿಯೇ ಹೇಳುತ್ತದೆ.

ಬಹುಕಾಲದಿಂದ ಕೆಲಸದ ಹಂಚಿಕೆ ಲಿಂಗತ್ವವನ್ನು ಆಧರಿಸಿ ಇದೇ ಮಾದರಿಯಲ್ಲಿ ನಡೆಯುತ್ತಿದೆ. ಹಾಗಿದ್ದರೆ ಇದನ್ನು ಬದಲಾಯಿಸುವುದು ಯಾವಾಗ? ಹೆಣ್ಣು ಅಡುಗೆ ಮಾಡಬೇಕು, ಗಂಡು ಅಡುಗೆಮನೆಯ ಹೊರಗಿನ ಕೆಲಸವನ್ನೇ ಮಾಡಬೇಕು ಎಂಬ ಪೂರ್ವಗ್ರಹದಿಂದ ಹೊಸ ತಲೆಮಾರಿನವರಾದರೂ ಮುಕ್ತರಾಗುವುದು ಸಾಧ್ಯವಿಲ್ಲವೇ? ಅಥವಾ ಈ ಪೂರ್ವಗ್ರಹವು ಬದಲಾಗದಂತೆ ಜಾಣ್ಮೆಯಿಂದ ನೋಡಿಕೊಳ್ಳಲಾಗುತ್ತದೆಯೇ?

## ಪೂರ್ವಗ್ರಹಗಳಲ್ಲಿ ಬಂದಿಗಳು!

ಸಾಫ್ಟ್‌ವೇರ್ ಉದ್ಯೋಗಿ ಆಗಿರುವ ಆಶಾಲತಾ ಗುರುತಿಸುವ ಇನ್ನೊಂದು ಅಂಶ ಹೀಗಿದೆ: “ಮಹಿಳೆಯು ತನಗೆ ಸೀಮಿತವಾಗಿದ್ದ ಕೆಲಸಗಳನ್ನು ಮೀರಿ ಪುರುಷರದೆಂದು ಹೇಳಲಾದ ಕೆಲಸಗಳನ್ನು ಯಾವಾಗ ಮಾಡುತ್ತಾಳೋ, ಆ ಸಂದರ್ಭದಲ್ಲಿ ಮಹಿಳೆಯು ಮಾಡಬೇಕಾದ ಕೆಲಸಗಳನ್ನು ಪುರುಷರು ತಮ್ಮದೆಂದು ಬಗೆದು ಮಾಡುವುದಿಲ್ಲ. ಉದಾಹರಣೆಗೆ, ಉದ್ಯೋಗ ಕ್ಷೇತ್ರದಲ್ಲಿ ವ್ಯಸ್ತಳಾಗಿರುವ ಮಹಿಳೆ ಮನೆಯಲ್ಲಿ ಕುಟುಂಬದ ಸದಸ್ಯರಿಗಾಗಿ ಅಡುಗೆ ಸಿದ್ಧಪಡಿಸಿ ಹೋಗುವುದು ಸಾಧ್ಯವಾಗದೇ ಇದ್ದಾಗ, ಅಲ್ಲಿ ಮತ್ತೊಬ್ಬಳು ಅಡುಗೆಯ ಸಹಾಯಕಿಯನ್ನು ನೇಮಿಸಿಕೊಳ್ಳಲಾಗುತ್ತದೆಯೇ ಹೊರತು, ಅದನ್ನು ಪತಿಯೋ, ಅಣ್ಣನೋ, ಮಾವನೋ



ಹೆಣ್ಣಾಗಲೀ, ಗಂಡಾಗಲೀ ಹಾಳಾಗುತ್ತಾರೆ ಎಂದು ಹೇಳುವುದೇ ಸರಿಯಲ್ಲ. ಭಾರತೀಯ ಸಮಾಜದಲ್ಲಿ ಪಾವಿತ್ರ್ಯತೆ ಎಂಬ ಪದವನ್ನು ಹೆಣ್ಣಿಗೆ ಮಾತ್ರ ಆರೋಪಿಸಲಾಗುತ್ತದೆ. ಗಂಡಾಳ್ವಿಕೆಯಲ್ಲಿ ಈ ಧೋರಣೆಯು ನಿಚ್ಚಳವಾಗಿ ಕಂಡುಬರುತ್ತದೆ. ಆದ್ದರಿಂದಲೇ ನಮ್ಮ ಸಮಾಜದಲ್ಲಿ ಹೆಣ್ಣನ್ನು ಎರಡನೇ ದರ್ಜೆಯ ಪ್ರಜೆಯಂತೆ ಪರಿಭಾವಿಸಲಾಗುತ್ತದೆ. ಇಲ್ಲವಾದರೆ ನಮ್ಮ ಜನಸಂಖ್ಯೆಯ ಅರ್ಧದಷ್ಟು ಸಂಖ್ಯೆಯಲ್ಲಿರುವ ಮಹಿಳೆಗೆ ಶೇ. 33 ಮೀಸಲಾತಿ ಕಲ್ಪಿಸುವ ಬದಲು ಶೇ. 50ರಷ್ಟು ಮೀಸಲಾತಿ ಕೊಡಬಹುದಲ್ಲವೇ? ಧಾರ್ಮಿಕತೆಯ ಕಪಿಮುಷ್ಟಿಯಲ್ಲಿ ಸಿಲುಕಿರುವ ನಮ್ಮ ಸಮಾಜವು ಹೆಣ್ಣನ್ನು ಈ ರೀತಿ ನೋಡುವುದರಿಂದಲಾಗಿಯೇ ಆಕೆಯು ತನ್ನದೇ ಆದ ವ್ಯಕ್ತಿತ್ವವನ್ನು ಸ್ವತಂತ್ರವಾಗಿ ಕಟ್ಟಿಕೊಳ್ಳಲು ಹೊರಟಾಗ, ಹತ್ತಾರು ಟೀಕೆಗಳು ಜೋರಾಗಿ ಕೇಳಿಬರುತ್ತವೆ.

**-ವಿಕಾಸ ಆರ್ ಮೌರ್ಯ**

**ಲೇಖಕ**

ನಿರ್ವಹಿಸಬಹುದೇ ಎಂಬ ಪ್ರಶ್ನೆಯೇ ಎದುರಾಗುವುದಿಲ್ಲ. ಇದು ಪುರುಷರಿಂದ ಸಾಧ್ಯವಾಗದ ಕೆಲಸ ಎನ್ನುವುದನ್ನು ಎಷ್ಟೋ ಬಾರಿ ಮಹಿಳೆಯರೇ ನಿರ್ಧರಿಸುವುದಿದೆ.

ಅಡುಗೆ ಎನ್ನುವುದು ಒಂದು ಉದಾಹರಣೆಯಷ್ಟೆ. ಒಟ್ಟಿನಲ್ಲಿ ಕುಟುಂಬದ ಬಂಧವನ್ನು ಕಾಪಾಡುವ ಹೊಣೆಯನ್ನು ಮಹಿಳೆಯೇ ನಿಭಾಯಿಸಿಕೊಂಡು, ನಂತರ ಆಕೆ ಮನೆಯ ಹೊರಗಿನ ಕೆಲಸಗಳನ್ನು ನಿಭಾಯಿಸಬೇಕು ಎಂಬ ಪರೋಕ್ಷ ಒತ್ತಡ ಇದ್ದೇ ಇರುತ್ತದೆಯೇ ಹೊರತು, ಮಹಿಳೆಗೆ ಸಮಯದ ಕೊರತೆಯಿಂದ ನಿರ್ವಹಿಸಲು ಸಾಧ್ಯವಾಗದ ಕೆಲಸಗಳನ್ನು ಮನೆಯ ಪುರುಷ ಸದಸ್ಯರು ಜವಾಬ್ದಾರಿಯುತವಾಗಿ ಕೈಗೆತ್ತಿಕೊಂಡು ನಿಭಾಯಿಸುವುದು ಭಾರೀ ಅಪರೂಪ” ಎನ್ನುತ್ತಾರೆ ಆಶಾಲತಾ. ಅವಳಿಗೆಂದು ನಿಗದಿಪಡಿಸಲಾದ ಕೆಲಸವನ್ನು ಅವಳೇ ನಿಭಾಯಿಸಬೇಕು. ಹೆಚ್ಚುವರಿ ಕೆಲಸಗಳನ್ನೂ ಅವಳೇ ನಿಭಾಯಿಸಬೇಕು ಎನ್ನುವ ತತ್ವವಿದು ಎನ್ನುತ್ತಾರೆ ಅವರು. ಈ ಎಲ್ಲ ಹೊಣೆಗಾರಿಕೆಗಳ ಬೆಟ್ಟವನ್ನು ಪಕ್ಕಕ್ಕಿಟ್ಟು ಆಕೆ ಹಗುರವಾಗುವುದು ಸುಲಭವಾದ ಮಾತಲ್ಲ.

## ಅವಳ ವಿರಾಮ, ಅವಳ ಹಕ್ಕು

ಹೆಣ್ಣುಮಕ್ಕಳು ಕಥೆ ಪುಸ್ತಕಗಳನ್ನು ಓದಬಾರದು ಎನ್ನುವ ಕಾಲವೊಂದಿತ್ತು. ಟೈಲರ್ ಆಗಿರುವ ಸುಗಂಧಿಯೂ ಮೊನ್ನೆಯಷ್ಟೇ ಒಂದು ಮಾತು ಹೇಳಿದಳು. ‘ಮದುವೆ ಮನೆಗೆಂದು ಚೆನ್ನಾಗಿ ಸಿಂಗಾರ ಮಾಡಿಕೊಂಡಿದ್ವಿ. ಒಂದು ರೀಲ್ಸ್ ಮಾಡೋಣ ಎಂದುಕೊಂಡಿದ್ವಿ. ಮದುವೆ ಮನೆಯ ಅಲಂಕಾರದ ಹಿನ್ನೆಲೆಯಲ್ಲಿ ಒಂದು ರೀಲ್ಸ್ ಮಾಡಿ ಅಪ್‌ಲೋಡ್ ಮಾಡಿದ್ದಾಯಿತು. ಆದರೆ ಮಹಿಳೆಯರೆಲ್ಲ ಪುರುಸೊತ್ತಾಗಿದ್ದರೆ ಬರೀ ರೀಲ್ಸ್ ಮಾಡಿಕೊಂಡಿರುತ್ತಾರೆ ಎಂದು ಮನೆಯಲ್ಲಿ ರೇಗುವುದು ನಡೆದೇ ಇತ್ತು. ಸುಗಂಧಿ ಕೇಳುವ ಪ್ರಶ್ನೆಯಿಷ್ಟೇ, ಮದುವೆಯ ನೆಪದಲ್ಲಿ ಬಾಟಲಿಗಟ್ಟಲೆ ಮದ್ಯವನ್ನು ತರಿಸಲಾಗುತ್ತದೆ. ಮದ್ಯ ಸೇವನೆಯ